ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ರಾತ್ರಿ ಫೋಟೊಗ್ರಫಿ ಎಂಬ ತಲುಬು

ಶ್ರೀಲಂಕನ್ ಫ್ರಾಗ್ ಮೌತ್ (ಕಪ್ಪೆಯ ಮುಖದ ಹಕ್ಕಿ) ಸಾವಿನಂಚಿನ ಖಗವಾಗಿ ಕೆಂಪುಪಟ್ಟಿಗೆ ಸೇರಿದೆ. ಜನ ಇದನ್ನು ತಪ್ಪಾಗಿ ಗೂಬೆಯೆಂದು ಭಾವಿಸುತ್ತಾರೆ. ಮೂಲತಃ ಸೌಮ್ಯ ಸ್ವಭಾವದ ಈ ಹಕ್ಕಿಯ ಕಣ್ಣ ನೋಟವೇ ಭಯಂಕರ...



'ಆಗಿದ್ದಾಗಲಿ, ಇವತ್ತು ರಾತ್ರಿ ನಮ್ಮೂರಿನ ಗುಡ್ಡ ಹತ್ತೋಣ ಸರ್. ಹಣೆಬರಹ ಚೆನ್ನಾಗಿದ್ರೆ ವಿಜ್ಞಾನಿಗಳು ನಾಶವಾಗಿವೆ ಎನ್ನುವ ಶ್ರೀಲಂಕನ್ ಫ್ರಾಗ್ ಮೌತ್ ಹಕ್ಕಿ ಹುಡುಕಬಹುದು. ಅದರ ಜೊತೆ ನೈಟ್ ಜಾರ್ ಕೂಡ ಸಿಕ್ಕೇ ಸಿಗುತ್ತೆ' ಎಂದು ವಿನಯ ಹುರುಪಿನಿಂದ ಹೇಳಿದ. ಕಾಳಿಂಗ ಸರ್ಪದ ಬೆನ್ನು ಹತ್ತಿ ಹಾಳಾದ್ದು ಅದೂ ಕೈ ತಪ್ಪಿ ಹೋಗಿತ್ತು. ತಥ್ ಥೆರಿಕೆ... ಇವತ್ತಿನ ದಿನ ಹಾಳಾಯಿತಲ್ಲ ಎಂದು ನಾನು ಶ್ರೀಕಾಂತ್ ಚಡಪಡಿಸುವಾಗ ಕತ್ತಲೂ ಆಗತೊಡಗಿತ್ತು. ಫೋಟೊಗ್ರಫಿ ಆಸೆ ಹೊತ್ತು ಓಡೋಡಿ ಬರುವ ಅನೇಕ ಸಮಯ ಇಂತಹ ನಿರಾಸೆ ಖಾಯಂ. ಈಗ ವಿನಯ ಹೇಳಿದ ಹಕ್ಕಿಗಳ ಹೆಸರು ಕೇಳಿದ್ದೇವೆಯೇ ವಿನಃ ನೋಡಿರಲಿಲ್ಲ. ಮನಸ್ಸಿನೊಳಗೆ ಸಣ್ಣ ರೋಮಾಂಚನ ಮೂಡಿತು. ಅನೇಕ ದಿನಗಳ ಹುಡುಕಾಟಕ್ಕೊಂದು ದುಸ್ಸಾಹಸ ನಡೆದರೇನು ತಪ್ಪು ಎಂಬ ಉಮೇದು ಬಂತು. ರಾತ್ರಿ ಫೋಟೊ ತೆಗೆಯುವ ವಿಧಾನ ಸರಿಯೆನಿಸಿತು. ಜೀವ ಪುಕುಪುಕು ಎಂದು ರೋದಿಸುತ್ತಿದ್ದರೂ ಆಯಿತು ಎಂದು ತಲೆ ಹಾಕಿದೆವು. ವಿನಯನ ಅತ್ತೆ ಮನೆಯಲ್ಲಿ ಮಾಡುತ್ತಿದ್ದ ಘಮಘಮ ನಾಟಿ ಕೋಳಿ ಸಾರು, ಬಾಳೆ ಎಲೆ ಅಗಲದ ಸುಡುಅಕ್ಕಿ ರೊಟ್ಟಿ ಕೂಡ ನಮಗೆ ವಾಪಸ್ಸು ಊರಿಗೆ ಹೋಗದಂತೆ ದಂಡೆ ಕಟ್ಟಿದವು.

ಮಲೆನಾಡಿನ ದಟ್ಟ ಕಾಡಿನ ನಡುವೆ ಇರುವ ವಿನಯನ ಅತ್ತೆ ಮನೆ ಸಮೀಪ ನಾನು ಬಗೆಬಗೆಯ ಹಾವುಗಳು, ಕಾಡುಪಾಪ, ಟ್ರೋಗನ್ ಹಕ್ಕಿ ಜೊತೆಗೆ ಅಪರೂಪದ ಕಪ್ಪೆಗಳನ್ನು ನೋಡಿದ್ದೆ. ಆದರೆ ಒಮ್ಮೆಯೂ ಆ ಮನೆಯಿಂದ ಎರಡು ಮೈಲಿ ದೂರದಲ್ಲಿದ್ದ ಆ ಬೆಟ್ಟವನ್ನು ಹತ್ತಲು ಹೋಗಿರಲಿಲ್ಲ.